**ದಿನಾಂಕಃ 15-06-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ ಶ್ರೀ. ಡಿ . ಎನ್ . ವಕೀಲರಿಂದ**

ಯಾವ ದಿನಾಂಕದಂದು ಒಪ್ಪಂದ ಆಗಿರುತ್ತದೆ ಎಂದು ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ . ಸದರಿ ದಿನ ವಾದಿ ಮತ್ತು ಪ್ರತಿವಾದಿಯರ ನಡುವೆ ಒಂದು ಒಪ್ಪಂದ ಮಾತ್ರ ಆಗಿರುತ್ತದೆ. ಸದರಿ ಒಪ್ಪಂದಕ್ಕೆ ಮಾತ್ರ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ. ದಾಖಲೆಯನ್ನು ಮದ್ಯಾಹ್ನ 12-30 ಗಂಟೆ ಸಮಯದಲ್ಲಿ ತಯಾರಿಸಿರುತ್ತಾರೆ . ಸದರಿ ದಾಖಲೆ ತಯಾರಿಸಲು ಛಾಪ ಕಾಗದವನ್ನು ಯಾರು ತಂದಿರುತ್ತಾರೆ ಎಂದು ನನಗೆ ನೆನಪಿರುವುದಿಲ್ಲ . ಸದರಿ ದಿನ ವಾದಿ ಮತ್ತು ಪ್ರತಿವಾದಿಯರ ನಡುವ ಏನು ಒಪ್ಪಂದ ಆಗಿರುತ್ತದೆ ಎಂದರೆ 1 ನೇ ಪ್ರತಿವಾದಿ ತನಗೆ ಸೇರಿದ ಜಮೀನನ್ನು ವಾದಿಗೆ ಮಾರಾಟ ಮಾಡಲು ಒಪ್ಪಿಕೊಂಡು ವಾದಿಯಿಂದ ರೂ. 1,30,000/- ಹಣವನ್ನು ಪಡೆದ ಬಗ್ಗೆ ಒಪ್ಪಂದವಾಗಿರುತ್ತದೆ . ನಾನು ವಾದಿ ಮತ್ತು ಪ್ರತಿವಾದಿಯರ ನಡುವೆ ಆದ ಕ್ರಯದ ಕರಾರಿಗೆ ಸಹಿ ಮಾಡಿರುವುದಿಲ್ಲ . ಸಾಕ್ಷಿ ಸ್ವತಃ ವಾದಿ 1 ನೇ ಪ್ರತಿವಾದಿಗೆ ನೀಡಿದ ರೂ. 1,30,000/- ಹಣದ ವ್ಯವಹಾರಕ್ಕೆ ಸಂಬಂಧಿಸಿ ನಾನು ದಾಖಲೆಗೆ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ . ಸದರಿ ದಾಖಲೆಯನ್ನು ಹೊರತುಪಡಿಸಿ ನಾನು ಬೇರೆ ಯಾವುದೇ ದಾಖಲೆಗೆ ನಾನು ಸಹಿ ಮಾಡಿರುವುದಿಲ್ಲ . ನಾನು ಹೇಳಿದಂತೆ ಸದರಿ ದಿನ ವಾದಿ ಮತ್ತು ಪ್ರತಿವಾದಿಯರ ನಡುವ ಯಾವುದೇ ಒಪ್ಪಂದ ಆಗದಿದ್ದರೂ ಸಹ ವಾದಿಗೆ ಸಹಾಯ ಮಾಡಲು ಒಪ್ಪಂದ ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ವಾದಿ ನಮ್ಮ ಗ್ರಾಮದವರಾಗಿದ್ದರಿಂದ ಸದರಿಯವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇನದ ಮೇರೆಗೆ ತೆರದ ನ್ಯಾಯಾಲಯ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ತಿ ಹೇ ಸ ಇದೆ**

**ಪಿ ಸಿ ಜೆ ಮತ್ತು ಜೆ ಎಂ ಎಫ್ ಸಿ**
**ಪಾವಗಡ**